# ಇಂಜಿನೀರಿಂಗ್





**ಗೆಲಾಕ್ಸಿ ಎಕ್ಸ್‌ಪ್ರೆಸ್**


**ವೆಕೇಷನ್ ಬೈಬಲ್ ಸ್ಕೂಲ್**

ಕಲಾ ಕೇಂದ್ರಕ್ಕೆ ಕರಪತ್ರ

# ಇಂಜಿನೀರಿಂಗ್ ಕಲಾ ಕೇಂದ್ರ





## ದಿನ 1

### ಪೆಟ್ಟಿಗೆಯಲ್ಲಿ ಮೋಶೆ

ಬೇಕಾದವುಗಳು :

ಸಿದ್ಧಗೊಳಿಸಿದ ಚಿತ್ರ (ಮುದ್ರಿಸಿರುವದು, ಕತ್ತರಿಸಿರುವದು ಮತ್ತು ರಂಧ್ರಗಳನ್ನು ಮಾಡುವ ಪಂಚ್)
ಕ್ರಯಾನ್‌ಗಳು (ಅಥವಾ ಕಲರ್ ಪೆನ್ಸಿಲ್‌ಗಳು, ಮಾರ್ಕರ್‌ಗಳು, ಅಥವಾ ಬಣ್ಣ (ಪೇಂಟ್))

ಸೂಚನೆಗಳು :

1. ಹಿಂಬಾಗದಲ್ಲಿ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಬರೆಯಲು ಹೇಳಿರಿ ಮತ್ತು ಮುಂಭಾಗದಲ್ಲಿ ಬಣ್ಣ ಹಾಕಿಸಿರಿ.
2. ಆ ರಂಧ್ರಗಳ ಮೂಲಕ ವಿದ್ಯಾರ್ಥಿಗಳು ತಂತಿಯನ್ನು ತೂರಿ ಕಟ್ಟುವದಕ್ಕೆ ಹೇಳಿರಿ.




## ದಿನ 2

### ಉರಿಯುತ್ತಿರುವ ಪೊದೆ

ಬೇಕಾದ ವಸ್ತುಗಳು :

ಪ್ರತಿ ವಿದ್ಯಾರ್ಥಿಗಾಗಿ ಆ ಚಿತ್ರವನ್ನು ಮುದ್ರಿಸಿ ಕಾಪಿ ಮಾಡಿಕೊಡಿರಿ
ಹರಿದ ಚಿಕ್ಕ ಚಿಕ್ಕ ಟಿಷ್ಯೂ ಕಾಗದಗಳು
ಕ್ರಯಾನ್‌ಗಳು

ಸೂಚನೆಗಳು :

1. ಪೊದೆಯಂತೆ ಇರುವವಗಳನ್ನು ಮಾಡಿಕೊಳ್ಳಿರಿ, ಅಥವಾ ಮಕ್ಕಳೇ ಆ ಚಿತ್ರವನ್ನು ಬಿಡಿಸಲು ಅನುಮತಿಸಿರಿ.

2. ಕೊಂಬೆಗಳಿಗೆ ಕಂದು ಬಣ್ಣವನ್ನು ಹಚ್ಚಿರಿ.

3. ಒಂದು ಕಟ್ಟಿಗೆಗೆ ಸುತ್ತ ಮುತ್ತ ಟಿಷ್ಯೂ ಕಾಗದವನ್ನು ಗಟ್ಟಿಯಾಗಿ ಹಚ್ಚಿರಿ, ಕ್ರಯಾನ್ ಅಥವಾ ಪೆನ್ಸಿಲ್, ಆದನಂತರ ಅದನ್ನು ಎಲೆಗಳನ್ನು ಮತ್ತು ಜ್ವಾಲೆಗಳನ್ನು ಬಿಡಿಸುವಂತೆ ಚಿತ್ರದ ಮೇಲೆ ಒಂದು ಅಂಟುನೊಳಗೆ ಒತ್ತಿರಿ.

4. ಅವರ ಚಿತ್ರದಲ್ಲಿ ಮಕ್ಕಳು ತಮ್ಮ ಸ್ವಂತ ಆಲೋಚನೆಗಳಿಂದ ಅನೇಕ ಚಿತ್ರಗಳನ್ನು ಬಿಡಿಸಬಹುದು, ಅವು ಯಾವುವೆಂದರೆ, ಕಲ್ಲುಗಳು, ಮರಳು, ಮರುಭೂಮಿಯನ್ನು, ಗುಡ್ಡ ಬೆಟ್ಟಗಳನ್ನು, ಸೂರ್ಯನನ್ನು, ಚಂದ್ರನನ್ನು, ಇನ್ನೂ ಅನೇಕವಾದವುಗಳನ್ನು ತಾವೇ ಸ್ವಂತವಾಗಿ ಬಿಡಿಸಬಹುದು. ನಿಮಗೆ ಸಮಯವಿದ್ದರೇ, ನಿಮ್ಮ ಮಕ್ಕಳು ಸೃಜನಾತ್ಮಕವಾಗಿ ಕೆಲಸ ಮಾಡಿಸಿರಿ!





India.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

# ದಿನ ೩

## ನಿಮ್ಮ ಕೆರಗಳನ್ನು ತೆಗೆದುಬಿಡಿ.



ಬೇಕಾದವುಗಳು :

ಕಾಗದ, ತಂತಿ ಅಥವಾ ದಾರ, ಪ್ರತಿಯೊಬ್ಬರಿಗೆ ಎರಡೆರಡು, ರಂಧ್ರವನ್ನು ಮಾಡುವ ಪಂಚ್, ಕತ್ತರಿ, ಪೆನ್ಸಿಲ್, ಪೆನ್ ಅಥವಾ ಮಾರ್ಕರ್.

ಸೂಚನೆಗಳು:

1. ಮಗುವಿನ ಪಾದದ ಚಿತ್ರವನ್ನು ಕಾಗದದ ಮೇಲೆ ಬಿಡಿಸಿ (ಮಕ್ಕಳು ಬೇರೆಯವರ ಪಾದದ ಚಿತ್ರವನ್ನು ಬಿಡಿಸಬಹುದು).

2. ಷೂ ಆಕಾರವನ್ನು ಕತ್ತರಿಸಿ, ಕಟ್ಟುವದಕ್ಕೆ ಪಂಚ್ ಮಿಷನ್‌ನಿಂದ ರಂಧ್ರಗಳನ್ನು ಹಾಕಿರಿ.

3. ಅವರ ಪಾದಗಳಿಗೆ ಅವುಗಳನ್ನು ಕಟ್ಟಿಕೊಳ್ಳುವದಕ್ಕೆ ಪ್ರತಿಯೊಬ್ಬರಿಗೆ ಎರಡೆರಡು ತಂತಿಗಳನ್ನಾಗಲಿ ಅಥವಾ ದಾರವನ್ನಾಗಲಿ ಕೊಡಿರಿ.


ಚೆನ್ನಾಗಿ ಕಟ್ಟಿಕೊಳ್ಳಬೇಕೆಂದು ನಿವೇನು ಚಿಂತೆ ಮಾಡಬೇಡಿರಿ. ಚಿಕ್ಕ ಮಕ್ಕಳು ಕಟ್ಟಿಕೊಳ್ಳುವದನ್ನು ತುಂಬಾ ಇಷ್ಟಪಡುತ್ತಾರೆ ಮತ್ತು ಅದು ಅವರಿಗೆ ಕಟ್ಟಿಕೊಳ್ಳುವದನ್ನು ಬೋಧಿಸುವದು. ಒಂದು ಉದ್ದವಾದ ತಂತಿಯಿಂದ ತಮ್ಮ ಕೆರಗಳನ್ನು ಕಟ್ಟಿಕೊಳ್ಳುವದಕ್ಕೆ ದೊಡ್ಡ ಮಕ್ಕಳು ಎಷ್ಟೋ ಸಂತೋಷಪಡುತ್ತಾರೆ.

4. ಕೆರಗಳ ಮೇಲೆ ಈ ರೀತಿಯಾಗಿ ಬರೆಯಿರಿ : "ಹೌದು ಕರ್ತನೇ, ನಾನಿಲ್ಲಿದ್ದೇನೆ" ಎಂದು ದೇವರಿಗೆ ನಾನು ಸ್ಪಂದಿಸುತ್ತೇನೆ.



India.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

## ದಿನ 4





# ಗೆಲಾಕ್ಸಿ ಎಕ್ಸ್‌ಪ್ರೆಸ್ ರಾಕೆಟ್

ಬೇಕಾದವುಗಳು :


* ಎಲ್ಲಾ ಮಕ್ಕಳಿಗೂ ಅಂತರಿಕ್ಷ ನೌಕೆಯ ನಮೂನೆ.
* ಕತ್ತರಿ (ಮಕ್ಕಳು ತಮ್ಮ ನೌಕೆಯನ್ನು ತಾವೇ ಕತ್ತರಿಸಬೇಕೆಂದಿದ್ದರೆ ಆ ರೀತಿಯಾಗಿ ಮಾಡಿರಿ. ಚಿಕ್ಕ ಮಕ್ಕಳಿಗಾಗಿ ಶಿಕ್ಷಕರು ನೌಕೆಯ ಭಾಗಗಳನ್ನು ಸೇರಿಸುವುದಕ್ಕೆ ಮುಂಚಿತವಾಗಿಯೆ ಕತ್ತರಿಸಿರಬೇಕು.)
* ಕ್ರೆಯಾನ್ಸ ಅಥವಾ ಬಣ್ಣದ ಪೆನ್ಸಿಲ್‌ಗಳು.
* ಅಂಟಿನ ಟೇಪ್ ಅಥವಾ ಅಂಟು

ಇಷ್ಟವಿದ್ದಲ್ಲಿ: ಕಾಲಿ ಟಾಯಿಲೆಟ್ ಪೇಪರಿನ ಟ್ಯೂಬನ್ನು ಉಪಯೋಗಿಸಬಹುದು.
ಇಷ್ಟವಿದ್ದಲ್ಲಿ: ಅಲಂಕಾರಕ್ಕಾಗಿ ನಕ್ಷತ್ರಗಳನ್ನು ಅಂಟಿಸಿ ಅಥವಾ ಸಣ್ಣ ಸಣ್ಣ ಅಲುಮೀನ್ಯಂ ಫಾಯಿಲ್‌ನ ತುಂಡುಗಳನ್ನು ಅಂಟಿಸಬಹುದು.

ಸೂಚನೆಗಳು:

1. ಎಲ್ಲಾ ದಪ್ಪ ಗೆರೆಗಳನ್ನು ಕತ್ತರಿಸಿ.
2. ಎಲ್ಲಾ ಭಾಗಗಳಲ್ಲಿ ಬಣ್ಣವನ್ನು ಹಚ್ಚಿರಿ.
3. "ಗೆಲಾಕ್ಸಿ ಎಕ್ಸ್‌ಪ್ರೆಸ್"ನ್ನು ಟ್ಯೂಬ್ ಆಕಾರದಲ್ಲಿ ಸುತ್ತಿ ಅದನ್ನು ಅಂಟು ಅಥವಾ ಅಂಟಿನ ಟೇಪಿನೊಂದಿಗೆ ಬದ್ರಪಡಿಸಿ.
4. ರಾಕೆಟ್ಟಿನ ಮುಖ್ಯ ಭಾಗಕ್ಕೆ ಸೇರಿಸಲು ರೆಕ್ಕೆಗಳಿಗೆ ಟ್ಯಾಬುಗಳಿವೇ. ಅವುಗಳನ್ನ ರಾಕೆಟ್ಟಿನ ಮುಖ್ಯ ಭಾಗಕ್ಕೆ ಸೇರಿಸುವದಕ್ಕಿಂತ ಮುಂಚಿತವಾಗಿ ಆ ರೆಕ್ಕೆಗಳನ್ನು ಒಂದರ ಮೇಲೆ ಮತ್ತೊಂದನ್ನು ಸೇರಿಸಿ.
5. ಮೇಲಿನ ಕೋನ್ ಆಕಾರವನ್ನು ಅಂಟಿಸುವದಕ್ಕಿಂತ ಮುಂಚಿತವಾಗಿಯೆ, ಟಾಯಿಲೆಟ್ ಪೇಪರಿನ ಟ್ಯೂಬನ್ನು ರಾಕೆಟ್ಟಿನ ಒಳ್ಳಕ್ಕೆ ಒತ್ತಿ ಮಲ್ಲಗೆ ಸುತ್ತಿ.
6. ಕೋನ್ ಆಕಾರವನ್ನು ಮಾಡಲು, ಚುಕ್ಕಿಗಳ ಗೆರೆಯ ಮೇಲೆ ಎರಡು ಭಾಗಗಳನ್ನು ಅಂಟಿಸಿ. ರಾಕೆಟ್ಟಿನ ಮೇಲಿರುವ ಟ್ಯಾಬ್‌ಗಳನ್ನು ಅಂಟು ಅಥವಾ ಅಂಟಿನ ಟೇಪ್ ನೊಂದಿಗೆ ಅಂಟಿಸಿ.

## ದಿನ 5



# ಕೆಂಪು ಸಮುದ್ರವನ್ನು ದಾಟುವುದು

ಬೇಕಾದವುಗಳು :

ಬಿಳಿಯ ಕಾಗದ ಮೇಲೆ ವಚನವನ್ನು ಅಥವಾ ಸಮುದ್ರದ ಚಿತ್ರವನ್ನು ಮುದ್ರಿಸಿರಿ. ನೀಲಿ ಕ್ರೆಯಾನ್, ಬಣ್ಣದ ಪೆನ್ಸಿಲ್‌ಗಳು, ಮರ್ಕರ್ ಅಥವಾ ಬಣ್ಣ.



ಸೂಚನೆಗಳು :

1. ನೀರಿನ ಭಾಗಗಳನ್ನು ಮತ್ತು ಒಣ ನೆಲ ಭಾಗಗಳಲ್ಲಿ ಬಣ್ಣ ಹಚ್ಚಿರಿ.
2. ಚುಕ್ಕಿಗಳಿರುವ ಗೆರೆಯ ಬಳಿ ಕತ್ತರಿಸಿ, ಒಣ ನೆಲದ ಬಳಿ ನಿಲ್ಲಿಸಿ.
3. ಕತ್ತರಿಸಿದ ಭಾಗಗಳನ್ನು ಗಟ್ಟಿಯಾಗಿ ಕಡಿ, ಪೆನ್ಸಿಲ್, ಅಥವಾ ಕ್ರೆಯಾನಿನ ಸುತ್ತಲು ಸುತ್ತಿ.


ಇಷ್ಟವಿದ್ದರೆ: ಸಣ್ಣ ಕಲ್ಲುಗಳನ್ನು ಒಣ ನೆಲವನ್ನು ಸೂಚಿಸುವಂಥೆ ಅಂಟಿಸಿರಿ.




India.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada


"ನಾನು ಯೆಹೋವನಿಗೆ ಮೊರೆಯಿಡುವಾಗ
ಆತನು ತನ್ನ ಪರಿಶುದ್ಧ ಪರ್ವತದಿಂದ
ಸದುತ್ತರವನ್ನು ಅನುಗ್ರಹಿಸುತ್ತಾನೆ."
ಕೀರ್ತ.3:4



"ನಾನು ಯೆಹೋವನಿಗೆ ಮೊರೆಯಿಡುವಾಗ
ಆತನು ತನ್ನ ಪರಿಶುದ್ಧ ಪರ್ವತದಿಂದ
ಸದುತ್ತರವನ್ನು ಅನುಗ್ರಹಿಸುತ್ತಾನೆ."
ಕೀರ್ತ.3:4




“ಆಗ, ಯಾವನನ್ನು ಕಳುಹಿಸಲಿ, ಯಾವನು
ನಮಗೋಸ್ಕರ ಹೋಗುವವನು ಎಂಬ ಕರ್ತನ
ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು
ಕಳುಹಿಸು ಅಂದೆನು.” _ ಯೆಶಾ.6:8



“ಆಗ, ಯಾವನನ್ನು ಕಳುಹಿಸಲಿ, ಯಾವನು
ನಮಗೋಸ್ಕರ ಹೋಗುವವನು ಎಂಬ ಕರ್ತನ
ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು
ಕಳುಹಿಸು ಅಂದೆನು.” _ ಯೆಶಾ.6:8


ಗೆಲಾಕ್ಸಿ ಎಕ್ಸ್‌ಪ್ರೆಸ್
ಗೆಲಾಕ್ಸಿ ಎಕ್ಸ್‌ಪ್ರೆಸ್



"ಆತನ ಶಕ್ತಿ

ಪ್ರದರ್ಶಕವಾದ

ಆಕಾಶಮಂಡಲದಲ್ಲಿ

ಆತನನ್ನು

ಸ್ತುತಿಸಿರಿ."

ಕೀರ್ತ 150:1



India.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

ಮಕ್ಕಳ ಸೇವೆ ಅನೇಕಬಾರಿ ನಿರ್ಲಕ್ಷ್ಯತೆಗೆ, ಅತೀ ಕಡಿಮೆ ಖರ್ಚಿನ ಸೇವೆ ಎಂಬುದಾಗಿ ಪರಿಗಣಿಸಲ್ಪಟ್ಟಿದೆ ಮತ್ತು ಕ್ರೈಸ್ತ ಸೇವೆಗಳಲ್ಲಿ ಅತೀ ಹೆಚ್ಚಾಗಿ ಈ ಸೇವೆಯನ್ನು ಮಾಡುತ್ತಿರುತ್ತಾರೆ. ಆದರೆ ಇನ್ನೂ ಅನೇಕ ಲಕ್ಷಾಂತರ ಮಕ್ಕಳು ಯೇಸುವಿನ ಕುರಿತಾಗಿ ಕೇಳುವ ಅವಶ್ಯಕತೆಯುಂಟು!



**ಇದಕ್ಕಾಗಿಯೇ ನಾವು ನಮ್ಮ ಸಂಪೂರ್ಣ ಸಮಯವನ್ನೆಲ್ಲಾ ಸಂಡೇ ಸ್ಕೂಲ್ ಮತ್ತು ವೆಕೇಷನ್ ಬೈಬಲ್ ಸ್ಕೂಲ್‌ಗೆ ಸಂಬಂಧಿಸಿದ ಪಠ್ಯ ಕ್ರಮಗಳನ್ನು, ತರಬೇತಿಗೆ ಬೇಕಾಗುವ ಅಗತ್ಯತೆಗಳನ್ನು ಮತ್ತು ಮಕ್ಕಳ ಸೇವೆಗಾಗಿ ಬೇಕಾಗುವ ಇನ್ನಿತರ ಸಂಪನ್ಮೂಲಗಳನ್ನು ವಾಸ್ತವಿಕವಾಗಿಯೂ, ಸಂಪೂರ್ಣವಾಗಿಯೂ ತಯಾರಿಸುವದಕ್ಕೆ ವೆಚ್ಚಿಸುತ್ತಿದ್ದೇವೆ.**

ನಾವು ಈಗಾಗಲೇ ಲ್ಯಾಟಿನ್ ಅಮೇರಿಕಾ ಗೋಸ್ಕರ ಈ ಕೆಳಗಿನವುಗಳನ್ನು ಸ್ಪಾನಿಷ್ ಭಾಷೆಯಲ್ಲಿ ಸಿದ್ಧಗೊಳಿಸಿದ್ದೇವೆ.

> 7 ವರ್ಷದ ಸಂಡೇ ಸ್ಕೂಲ್ ಪಠ್ಯ ಕ್ರಮ
> 7 ವಿಬಿಎಸ್ ಪಠ್ಯ ಕ್ರಮಗಳು
> ಹಾಡುಗಳಿಗೆ ನೃತ್ಯಗಳು ಅಥವಾ ನಿಯಮಗಳೊಂದಿಗೆ 14 ಡಿವಿಡಿಗಳು
> ಸಂಗೀತ 23 ಸೀಡಿಗಳು
> ತರಬೇತಿಯ ಪುಸ್ತಕಗಳು ಮತ್ತು ವೀಡಿಯೋಗಳು
> ಮೂವಿ ಕ್ಯಾಂಪುಗಳು
> ಈಸ್ಟರ್ ಮತ್ತು ಕ್ರಿಸ್ಮಸ್ ಕಾರ್ಯಕ್ರಮಗಳು
> ಗೊಂಬೆಗಳು ಮತ್ತು ಬಣ್ಣಗಳನ್ನು ಹಾಕಲು ಪುಸ್ತಕಗಳು

ಮಕ್ಕಳೇ ಪ್ರಮುಖರು

ಎಂದು ನಾವು ನಂಬುತ್ತಿರುವದರಿಂದಲೇ ಇವೆಲ್ಲವನ್ನು ಮಾಡಲು ಇಚ್ಚಿಸುತ್ತಿದ್ದೇವೆ.



www.ChildrenAreImportant.com

ನಮ್ಮ ಈ ಮಾಹಿತಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವದಕ್ಕೂ, ಉಪಯೋಗಿಸಿಕೊಳ್ಳುವದಕ್ಕೂ, ಮುದ್ರಿಸಿಕೊಳ್ಳುವದಕ್ಕೂ ಮತ್ತು ಯಾವ ನಿರ್ಬಂಧಗಳಿಲ್ಲದೇ ಎಲ್ಲಾ ಸಂಸ್ಥೆಗಳಿಗೆ ಮತ್ತು ಸಭೆಗಳಿಗೆ ಹಂಚುವದಕ್ಕೂ ಉಚಿತವಾಗಿ ಕೊಡಲ್ಪಟ್ಟಿದೆ.

* ಅನೇಕ ಭಾಷೆಗಳಲ್ಲಿ ಈ ರೀತಿಯಾದ ಅಂಶಗಳನ್ನು ಬರೆಯಲು, ಮುದ್ರಿಸಿದವುಗಳನ್ನು ಹಂಚಲು ನಮ್ಮೊಂದಿಗೆ ಸಹಕರಿಸಲು ಆಸಕ್ತಿಯಿಂದ ನೀವು ಇರುವದಾದರೆ, ದಯೆಮಾಡಿ ನಮ್ಮನ್ನು ಸಂಪರ್ಕಿಸಿ. ನಿಮ್ಮೊಂದಿಗೆ ನಾವು ಮಾತನಾಡಲು ಇಷ್ಟಪಡುತ್ತಿದ್ದೇವೆ! info@childrenareimportant.com

# ಹೆಚ್ಚಿನ ಆಲೋಚನೆಗಳು

ಇಂಜಿನೀರಿಂಗ್

## ಹೆಚ್ಚಿನ ಹಸ್ತ ಕಲಾ ವಸ್ತುಗಳು



ಇದು ಸಂತೋಷ ಮತ್ತು ಸಂಭ್ರಮವನ್ನು ತೋರಿಸುವದು, ಸೂಪರ್‌ನೋವಾದಂಥೆ ಇರುತ್ತದೆ! ದೇವರ ಕುರಿತಾಗಿ ಮತ್ತು ಆತನು ನಮಗಾಗಿ ಮಾಡಿದ ಕಾರ್ಯಗಳ ಕುರಿತಾಗಿ ನಾವು ಆಲೋಚಿಸುತ್ತಿರುವಾಗ ನಮ್ಮಲ್ಲಿ ಎಷ್ಟೋ ಸಂತೋಷವು ಹುಕ್ಕಿ ಬರುವದು.

"ನಾನು ದೇವರನ್ನು ಆರಾಧಿಸುವೆನು" ಎಂದು ಶೀರ್ಷಿಕೆ ಹೇಳಬಹುದು.

ಹಸ್ತ ಕಲಾ ಚಟುವಟಿಕೆ : ಬಾಹ್ಯಾಕಾಶದಿಂದ ಭೂ ಗ್ರಹವನ್ನು ನೋಡಿದಾಗ ಕಾಣುವಂಥ ಭೂಮಿಯ ಚಿತ್ರ.



1. ಒಂದು ಟವಲ್ ಉಪಯೋಗಿಸಿ ಕಾಗದದ ಮಧ್ಯೆಯಲ್ಲಿ ಒಂದು ದೊಡ್ಡ ವೃತ್ತವನ್ನು ವಾಟರ್‌ಪ್ರೂಫ್ ಮಾರ್ಕರ್‌ನಿಂದ ಎಳೆಯಿರಿ.
2. ಭೂ ಗ್ರಹವನ್ನು ಬಣ್ಣಗಳಿಂದ ತುಂಬಿಸಲು ಮಕ್ಕಳಿಗೆ ಹಸಿರು ಬಣ್ಣದ ಮಾರ್ಕರ್‌ಗಳನ್ನು ಕೊಡಿರಿ. ನೀರಿನ ಚಿತ್ರವನ್ನು ಬಿಡಿಸಲು ನೀಲಿ ಮಾರ್ಕರ್‌ಗಳನ್ನು ಕೊಡಿರಿ.
3. ಇವಾಗ ನೀರಿನಿಂದ ಬಣ್ಣ ಹಚ್ಚಲು ವಿದ್ಯಾರ್ಥಿಗಳಿಗೆ ಹೇಳಿ ಆರಂಭಿಸಿ. ಆ ವೃತ್ತವನ್ನೆಲ್ಲಾ ನೀರಿನಿಂದ ಒಂದು ಸಲ ಹಸಿ ಮಾಡಬೇಕು ಮತ್ತು ಆ ಬಣ್ಣಗಳು ಚೆನ್ನಾಗಿ ಕಲಬೆರಕೆ ಯಾಗುವಂಥೆ ನೋಡಿಕೊಳ್ಳಿರಿ.
4. ಒಂದು ಸಲ ಅದು ಒಣಗಿ ಹೋದನಂತರ, ವೃತ್ತದ ಸುತ್ತಲಿರುವ ಕಪ್ಪು ಗೆರೆಯನ್ನು ಕತ್ತರಿಸಿ ಮತ್ತು ಒಂದು ಕಪ್ಪು ಕಾಗದದ ಮೇಲೆ ಅದನ್ನು ಅವರು ಅಂಟಿಸಲಿ.

## ತರಗತಿಯ ಚಟುವಟಿಕೆ

ಪ್ರತಿಯೊಬ್ಬ ಮಗು ತನ್ನದೇಯಾದ ಮೇಘವನ್ನು ಮಾಡಲಿ ಮತ್ತು ಪ್ರತಿಯೊಬ್ಬರಿಂದ ಆ ಮೇಘಗಳನ್ನು ಒಂದು ಗೂಡಿಸಿ ಮೇಘ ಸ್ತಂಭವನ್ನಾಗಿ ಮಾಡಿರಿ. ಮೇಘಗಳನ್ನು ಮಾಡುವದಕ್ಕೆ, ಅವರೇ ಅವುಗಳನ್ನು ಚಿತ್ರಿಸಿ, ಕತ್ತರಿಸಿ ಮತ್ತು ಅವುಗಳನ್ನು ಅಲಂಕರಿಸಿ ಅಂಟಿಸಲಿ. (ಮಾರ್ಕೆಟ್‌ನಲ್ಲಿ ಸಿಗುವ ಬಿಳಿ ಪುಡಿ ಅಥವಾ ಗ್ಲಿಟ್ಟರ್‌ನ್ನು ಉಪಯೋಗಿಸಿರಿ.) ಅಗ್ನಿ ಜ್ವಾಲೆಗಳಿಗಾಗಿ ಅದೇ ವಿಧಾನವನ್ನು ಉಪಯೋಗಿಸಿ.





India.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada



ನಿಮ್ಮ ವಿಬಿಎಸ್ ಕಾರ್ಯಕ್ರಮವನ್ನು ಚೆನ್ನಾಗಿ ಯಶಸ್ವಿಗೊಳಿಸಲು ಉಪಯೋಗಿಸುವದಕ್ಕೆ ನಿಮ್ಮ ಉಪಾಧ್ಯಾಯರಿಗೆ ಈ ಸಾಧನೆಗಳೆಲ್ಲಾ ಅದ್ಭುತವಾಗಿರುತ್ತವೆ! ಗ್ರೇ ಟೇಪ್‌ಯಿಂದಾಗಲಿ ಅಥವಾ ಟಿನ್‌ಫಾಯಿಲ್‌ನಿಂದಾಗಲಿ 2 ಲೀಟರ್ ಸೋಡಾ ಬಾಟಲ್‌ಗಳ ಮೇಲೆ ಸಂಪೂರ್ಣವಾಗಿ ಸುತ್ತಿರಿ, ಟಿಸ್ಸ್ಯೂ ಕಾಗದದ ಜ್ವಾಲೆಗಳನ್ನು ಅಂಟಿಸಿರಿ ಮತ್ತು ನಿಮ್ಮ ಸೊಂಟಕ್ಕೆ ಅದನ್ನು ಕಟ್ಟಿಕೊಳ್ಳಿರಿ. ನಿಮ್ಮ ಉಪಾಧ್ಯಾಯರು "ಜೆಟ್ಟ ಪ್ಯಾಕ್‌ಗಳನ್ನು" ಕಟ್ಟಿಕೊಂಡಂಥೆ ಕಾಣಿಸಿಕೊಳ್ಳುವರು!

ನಿಮ್ಮ ವಿಬಿಎಸ್ ಕಾರ್ಯಕ್ರಮದಿಂದ ಇಂಥಹ ಚಿತ್ರಗಳನ್ನು ಪಡೆಯಲು ಮಕ್ಕಳೆಲ್ಲರೂ ಸಂತೋಷಪಡುತ್ತಾರೆ.







ಇಲ್ಲಿ ವಿನೋದವುಂಟು, ಹೆಚ್ಚಿನ ಹಸ್ತ ಕಲಾ ವಸ್ತುವನ್ನು ನೀವು ನೋಡಿರಿ! ಒಂದು ಕಟ್ಟಿಗೆಯನ್ನು ತೆಗೆದುಕೊಂಡು, ಒಂದು ಕಡೆಗೆ ಅಗ್ನಿಯಂಥೆ ಕಾಣಿಸಿಕೊಳ್ಳಲು ಅಲಂಕರಿಸಿ, ಮತ್ತೊಂದು ಕಡೆಗೆ ಮೇಘ ಸ್ತಂಭದಂಥೆ ಕಾಣಿಸುವಂಥೆ ಅಲಂಕರಿಸಿ!



## ಚಟುವಟಿಕೆ : ಚಂದ್ರನ ಕುಳಿಗಳು



ನಿಮ್ಮ ವಿದ್ಯಾರ್ಥಿಗಳು ಹಿಟ್ಟಿನ ಮಿಶ್ರಣವನ್ನು ಮಾಡುವಂಥೆ ಹೇಳಿರಿ ಮತ್ತು ಅದಾದನಂತರ ಅದರೊಳಗೆ ಚಿಕ್ಕ ಚಿಕ್ಕ ಕಲ್ಲುಗಳನ್ನು ಹಾಕಿರಿ. ಅವಾಗಲೇ ನಿಮ್ಮ ಕಣ್ಣುಗಳ ಮುಂದೆ ಕುಳಿಗಳು ಬಂದಿರುವದನ್ನು ನೋಡಿವಿರಿ.


ಹಿಟ್ಟಿನ ಮಿಶ್ರಣ : 4 ಬಟ್ಟಲು ಹಿಟ್ಟು ಮತ್ತು 1/2 ಬಟ್ಟಲು ಎಣ್ಣೆ.



India.ChildrenAreImportant.com – Children's ministry resources, Sunday School, and Vacation Bible School (VBS) curriculum for churches and teachers. Kannada

ಇನ್ನೂ ಹೆಚ್ಚಿನ ಸಂಪನ್ಮೂಲಗಳಿಗಾಗಿ ಆನ್‌ಲೈನ್‌ನಲ್ಲಿ
ಪಡೆದು ಡೌನ್‌ಲೋಡ್ ಮಾಡಿಕೊಳ್ಳಿರಿ.

**India.ChildrenAreImportant.com/galaxy**



Crafts Galaxy Kannada

13656

India.ChildrenAreImportant.com
info@childrenareimportant.com
We are located in Mexico.
DK Editorial Pro-Visión A.C.

ಮಕ್ಕಳೇ ಪ್ರಮುಖರು